ನಿಬಿಡವಾಗುತ್ತ, ನಿಗೂಢವಾಗುತ್ತ ಭಯ ಹುಟ್ಟಿಸುವಂತಿತ್ತು. ಅಲ್ಲಲ್ಲಿ ಕಿರು ಅಡ್ಡ ದಾರಿ ಬಿಟ್ಟರೆ ಅನಾಮಿಕ ರಸ್ತೆ ವಿಚಿತ್ರ ಅವದೂತನಂತೆ ಸಾಗಿತ್ತು. ಊರಿನ ದೂರ, ನಕಾಶೆ ಏನೂ ಇರಲಿಲ್ಲ. ಸದಾನಂದ ಹುಂಬ ಧೈರ್ಯದಿಂದ ಚಾಲನೆ ಮಾಡುತ್ತಿದ್ದ. ಒಂದು ಭಯಂಕರ ಏರಿನ ಬಳಿಕ ಕಡಿದಾದ ಕಣಿವೆಯತ್ತ ರಸ್ತೆ ತಿರುವಿಕೊಂಡು ಹೋಯಿತು. ಅಲ್ಲಿ ರಸ್ತೆ ಕವಲೊಡೆದಿತ್ತು. ಕಾರು ನಿಲ್ಲಿಸಿ ಊಹಿಸಿದ. ಮಹಾ ನಿರ್ಲಕ್ಷ್ಯದ ನೀರವತೆಯಲ್ಲಿ ಅವನಿಗೆ ಏನೂ ಹೊಳೆಯಲಿಲ್ಲ. ನರಮನುಷ್ಯರೂ ಕಾಣಲಿಲ್ಲ. ಮಂಗವೊಂದು ಅಣಕಿಸುವಂತೆ ಹಲ್ಲು ಗಿಂಜಿ ಕಿರುಚಿತು; ತುಸು ಸವೆದ ರಸ್ತೆಯಲ್ಲಿ ಚಲಿಸಿದ. ದೂರ ಆಳದಲ್ಲಿ ಹೊಳೆ ಹರಿಯುತ್ತಿದ್ದ ಸದ್ದು ಕೇಳಿತು. ಅದು ಜಲಪಾತಕ್ಕೊಯ್ಯುವ ರಸ್ತೆ ಎಂದು ಕಾರನ್ನು ಹೊರಳಿಸಿದ. ತಲೆಯ ಮೇಲೆ ಏನೊ ಹೊತ್ತು ಕಾಲ್ದಾರಿ ಗುಂಟ ಘಟ್ಟ ಏರಿ ಬರುತ್ತಿದ್ದ ಹೆಂಗಸನ್ನು ವಿಚಾರಿಸಿದ. ಅವಳು ತನ್ನ ಗಂಟುಗಂಟಾದ ಬೆರಳುಗಳಿಂದ ತುಸು ಬಯಲಂತೆ ಭಾಸವಾಗುವ ದಿಕ್ಕನ್ನು ತೋರಿ ಅದೃಶ್ಯಳಾದಳು. ಆ ರಸ್ತೆ ಹರಿಗದ್ದೆಗೆ ಸುರಕ್ಷಿತ ಕರೆದೊಯ್ಯಿತು.

ಅಂಕುಡೊಂಕಾದ ಮಾವಿನ ಮರದಡಿಯ ಪಾಳುಬಿದ್ದ ಗದ್ದೆಯ ಕಳವನ್ನು ನೋಡಿದೊಡನಯೇ ಸದಾನಂದನೊಳಗೆ ಪೂರ್ವಜನ್ಮದ ಅವಶೇಷ ಎದ್ದು ಕೂತಂತೆ ಭಾಸವಾಯಿತು. ಅಸ್ಪಷ್ಟ ಕನಸಿನಂತಹ ಮಸಕುಮಸಕಾದ ನೆನಪು. ಹತ್ತು ವರ್ಷಗಳ ಹಿಂದೆ ಗೆಳೆಯರ ಜತೆ ಮಂಚಿಕೇರಿಯ ಮನೆಯಲ್ಲಿ ವಾಸ್ತವ್ಯ ಮಾಡಿ ಬೇಡ್ತಿ ಹೊಳೆಯ ದಂಡೆಯ ಮೇಲೆ ಬೆಳದಿಂಗಳ ರಾತ್ರಿ ಕಳೆದದ್ದು ನಿಚ್ಚಳವಾಯಿತು. ಹರಿಗದ್ದೆಯನ್ನು ಹಾದು ಹೋದ ದಾರಿ ಗುಂಟ ಬಂದದ್ದು, ಹೊಳೆ ಸಾಲಿನಲ್ಲಿ ನಡೆಯುತ್ತಿದ್ದಾಗ ಬೆಂಕಿ ಪೊಟ್ಟಣ ಬಿಟ್ಟು ಬಂದದ್ದು ನೆನಪಾಗಿ ಪರತ್ ಓಡಿ ಹೋಗಿ ಹರಿಗದ್ದೆಯಿಂದ ತಂದದ್ದು, ಕನ್ನಡ ಶಾಲೆಗೆ ಹೋಗುವ ವಯಸ್ಸಿನ ಎರಡು ಜಡೆಯ ಲಂಗದ ಮೋಹಕ ಹುಡಗಿಯನ್ನು ನೋಡಿದ್ದು, ಅವಳು ತನ್ನ ಹೆಸರು ಸಂಪದ ಎಂದದ್ದು, ಮುಸ್ಸಂಜೆಯ ಅವಳ ಮುಖ ಚಿತ್ತದಲ್ಲಿ ಅಚ್ಚೊತ್ತಿದ್ದದ್ದು, ಅವಳಿಂದ ಬಿಡುಗಡೆಯಾಗಲು ತಾನೊಂದು ಕತೆ ಬರೆದು ಕಥಾ ಸ್ಪರ್ಧೆಯಲ್ಲಿ ಬಹುಮಾನ ಬಂದದ್ದು ತೆರೆದುಕೊಂಡಿತು. ತನ್ನ ಕಥೆಯೊಳಗೆ ನೇರ ನಡೆದಂತೆ ಸದಾನಂದ ಮನೆಯ ಒಳ ಹೊಕ್ಕ. "ನಾನೊಮ್ಮೆ ಇಲ್ಲಿಗೆ ಬಂದಿದ್ದೆ" ಎಂದ. "ನೀವು ಬರೆದ ಕಥೆ ಓದಿದ್ದೇನೆ" ಸಂಪದ ನಾಚುತ್ತ ನುಡಿದಳು. ಕದದ ಹಿಂದೆ ಹಿಂಜರಿಕೆಯಲ್ಲಿ ನಿಂತ ಮಾಲತಿಗೆ, "ನನ್ನ ಗೆಳಯನಿಗೆ ಜಮೀನು ಬೇಕಿತ್ತು..." ಎಂದ. ಅವಳು ತಲೆ ತೂಗಿದಳೆ ವಿನಃ ಮಾತಾಡಲಿಲ್ಲ. ಸಂಪದ ಗದ್ದೆತೋಟ ತಿರುಗಾಡಿಸಿಕೊಂಡು ಬಂದಳು. ತಾನು ಚಿತ್ರಿಸಿದ ಜಾಗ ಅಲೆದಾಡಿ, ತನ್ನ ಕಥಾ ಪಾತ್ರದ ಜೊತೆಗೆ ಸುತ್ತಾಡಿದ್ದು ಅವನಿಗೆ ಮಜವೆನಿಸಿತು. ಕಾರು ಏರಿ, "ನನ್ನ ದೋಸ್ತನ ಕಲ್ಪನೆಯಲ್ಲಿದ್ದ ಜಮೀನು ಸರಿಸುಮಾರಾಗಿ ಹೀಗೆಯೇ ಇದೆ, ಮಾತಾಡ್ತೇನೆ" ಎಂದ.

★★★

ಕಥೆ ಮತ್ತು ನಿಜಜೀವನದ ನಡುವಿನ ಗರೆ ಅಳಿಸಿ ಹೋದ ವಿಚಿತ್ರ ಅನುಭವದಲ್ಲಿ ಸದಾನಂದ ವಿಹರಿಸಿದ. ಸಂಪದ ಜೀವಂತ ವ್ಯಕ್ತಿಯಾಗಿ, ಪಾತ್ರವಾಗಿ ಈಗ ಓದುಗಳಾಗಿರುವುದು ಮಾಯೆಯಂತೆ ಕಾಡಿತು. ಆ ಕಥೆಯನ್ನು ಓದುವ ಉತ್ಕಟ ಇಚ್ಛೆಯಲ್ಲಿ ಮನೆಗೆ ಬಂದು ಹುಡುಕಿದ. ಪುಸ್ತಕ ಸಿಗದೆ ನಿರಾಸೆಯಾಯಿತು. ತನ್ನ ಬಳಿ ಒಂದು ಪ್ರತಿಯೂ ಇಲ್ಲ. ಹರಿಗದ್ದೆಯಲ್ಲೇ ಇತ್ತೇನೊ ಎಂದು ಕುತೂಹಲವಾಯಿತು. ಸಿರ್ಸಿಗೆ ಹೋದವನು ರಾಯರ ಪೇಟೆಯ ಹಳೆಯ ಸೆಕೆಂಡ್ ಹ್ಯಾಂಡ್ ಪುಸ್ತಕದ ಅಂಗಡಿಗೆ ಹೋಗಿ ಕೇಳಿದ. "ತಿಂಗಳಿಂದ ಒಂದೇ